**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2294 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.03.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕರ್ನಾಟಕ ವೈದ್ಯಕೀಯ ಮಂಡಳಿಯಲ್ಲಿ ನೋಂದಣಿ ಮಾಡಿಸಲು ಇರುವ ಮಾನದಂಡವೇನು ; ವೈದ್ಯರ ನೋಂದಣಿಗೆ ವಿಧಿಸಿರುವ ಶುಲ್ಕವೆಷ್ಟು ? | ಕರ್ನಾಟಕ ವೈದ್ಯಕೀಯ ಮಂಡಳಿಯಲ್ಲಿ ನೋಂದಣಿ ಮಾಡಿಸಲು ಅಭ್ಯರ್ಥಿಗಳು ಕಡ್ಡಾಯವಾಗಿ ಎಂಬಿಬಿಎಸ್ ಪದವಿ ಪ್ರಮಾಣ ಪತ್ರ, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರ, ಇಂಟರ್ನ್‌ಶಿಪ್ ಕಂಪ್ಲೀಷನ್ ಸರ್ಟಿಫಿಕೇಟ್, ಎಂಬಿಬಿಎಸ್ ಅಂತಿಮ ವರ್ಷದ ಅಂಕಪಟ್ಟಿ ಮತ್ತು ಹತ್ತನೇ ತರಗತಿಯ ಅಂಕಪಟ್ಟಿ ಜೊತೆಗೆ ಆಧಾರ್ ಕಾರ್ಡನ್ನು ಸಲ್ಲಿಸಬೇಕು ; ವೈದ್ಯರ ನೋಂದಣಿಗೆ ರೂ.2,000/- ಶುಲ್ಕ ನಿಗದಿಪಡಿಸಲಾಗಿದೆ. |
| ಆ) | ರಾಜ್ಯದಲ್ಲಿರುವ ಕೆ.ಎಂ.ಸಿ ಯಲ್ಲಿ ನೋಂದಣಿಯಾದ ಮತ್ತು ನೋಂದಣಿಯಾಗದ ವೈದ್ಯರ ಸಂಖ್ಯೆ ಎಷ್ಟು ; ನೋಂದಣಿಯಾಗದ ವೈದ್ಯರ ವಿರುದ್ಧ ಕೈಗೊಂಡ ಕ್ರಮಗಳಾವುವು ? | ದಿನಾಂಕ: 31.12.2021ರಲ್ಲಿದ್ದಂತೆ ರಾಜ್ಯದಲ್ಲಿರುವ ಕೆ.ಎಂ.ಸಿ ಯಲ್ಲಿ ನೋಂದಣಿಯಾದ ವೈದ್ಯರ ಸಂಖ್ಯೆ-53,472 ; ನೋಂದಣಿಯಾಗದ ವೈದ್ಯರ ಅಂಕಿ-ಅಂಶಗಳ ಮಾಹಿತಿಯು ಕೆ.ಎಂ.ಸಿ ಯಲ್ಲಿ ಇರುವುದಿಲ್ಲ. |
| ಇ) | ನೋಂದಣಿಯನ್ನು ಕಂಪ್ಯೂಟರೈಸ್ಡ್ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು ; ಸಾರ್ವಜನಿಕರು ವೈದ್ಯರ ನೋಂದಣಿ ಬಗ್ಗೆ ಖಾತ್ರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? | ಕರ್ನಾಟಕ ವೈದ್ಯಕೀಯ ಮಂಡಳಿಯು ವೈದ್ಯರ ನೋಂದಣಿ ಮಾಡಿಕೊಳ್ಳಲು ಈಗಾಗಲೇ ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದೆ; ಕೆ.ಎಂ.ಸಿ ಯಲ್ಲಿ ವೈದ್ಯರು ನೋಂದಣಿ ಮಾಡಿಕೊಂಡಿರುವುದನ್ನು ಕಂಡುಕೊಳ್ಳುವ ಬಗ್ಗೆ ಸಾರ್ವಜನಿಕರು ಕೆ.ಎಂ.ಸಿ ಯ ಜಾಲತಾಣವನ್ನು ಉಪಯೋಗಿಸಿ ಖಾತ್ರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. |

**ಸಂಖ್ಯೆ:** ಎಂಇಡಿ 121 ಎಂಪಿಎಸ್ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು